**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ನ್ಯಾಯಾಲಯದಲ್ಲಿ**

**ಸಿಸಿ ನಂ. 975/2026**

| **ಪಿರ್ಯಾದುದಾರರು :** | **ವಿರುದ್ಧ** | **ಆರೋಪಿ:** |
| --- | --- | --- |
| ಶ್ರೀ.ಕೆ.ಮಲ್ಲಿಕಾರ್ಜುನಪ್ಪ ಬಿನ್ ಸಿದ್ದಪ್ಪ,<br>ವಯಸ್ಸು: 75 ವರ್ಷ,<br>ಉದ್ಯೋಗಃ ವ್ಯವಸಾಯ,<br>ವಾಸಃ ಯಕ್ಕೆಗೊಂದಿ ಗ್ರಾಮ,<br>ಸಿದ್ದನಮಠ ಅಂಚೆ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. | | ಸೈಯದ್ ಕಬೀರ್<br>ಬಿನ್ ಸೈಯದ್ ದಸ್ತಗೀರ್ ಸಾಬ್,<br>ವಯಸ್ಸುಃ 50 ವರ್ಷ,<br>ಉದ್ಯೋಗಃ ಮಾವಿನಗಿಡ ಖೇಣಿ ವ್ಯಾಪಾರಿ<br>ಮತ್ತು ಬಾರ್ ಬೆಂಡರ್,<br>ವಾಸಃ ಕೆರೆಬಿಳಚಿ ಗ್ರಾಮ ಮತ್ತು ಅಂಚೆ,<br>ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ. |

ನಾನು ಶ್ರೀಮತಿ. ಮಹಾಲಕ್ಷ್ಮಿ ಜಿ. ಎಂ.ಎ., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿಯಾದ ನಿನ್ನನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

**-: ಆಪಾದನೆ :-**

ಆರೋಪಿಯಾದ ನೀನು ಪಿರ್ಯಾದುದಾರರಿಂದ ದಿನಾಂಕ 15.07.2025 ರಂದು ವ್ಯವಹಾರ ಮತ್ತು ಗೃಹಕೃತ್ಯದ ಸಲುವಾಗಿ ರೂಃ 1,00,000/- ಮಾಹೆಯಾನ ಶೇಕಡ 2% ರಂತೆ ಹಣವನ್ನು ಸಾಲವಾಗಿ ಪಡೆದುಕೊಂಡು ಅದರ ತೀರುವಳಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆರೆಬಿಳಚಿ ಶಾಕೆಯ ನಿಮ್ಮ ಖಾತೆಗೆ ಸಂಬಂಧಿಸಿದ, ದಿನಾಂಕಃ 28.01.2026 ರ ಪೋಸ್ಟ್ ಡೇಟೆಡ್ ಚೆಕ್ ಸಂಖ್ಯೆ 673859 ನ್ನು ನೀಡಿದ್ದು, ಅದನ್ನು ಪಿರ್ಯಾದುದಾರರು ದಿಃ 28.01.2026 ರಂದು ತನ್ನ ಖಾತೆಯಾದ ಕೆನರಾ ಬ್ಯಾಂಕ್, ಸಂತೆಬೆನ್ನೂರು ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ್ದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಸದರಿ ಚೆಕ್ 30.01.2026 ರಂದು ಹಿಂದಿರುಗಿಸಲ್ಪಟ್ಟಿರುತ್ತದೆ. ಆದ್ದರಿಂದ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ10.02.2026 ರಂದು ಲೀಗಲ್ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ನೀವು ಸ್ವೀಕರಿಸಿದ್ದು ಸದರಿ ಸಾಲದ ಹಣವನ್ನು ಹಿಂದಿರುಗಿಸಿರುವುದಿಲ್ಲ ಹಾಗೂ ಲೀಗಲ್ ನೋಟಿಸಿಗೆ ಉತ್ತರವನ್ನು ಸಹ ನೀಡಿರುವುದಿಲ್ಲ. ಆದ್ದರಿಂದ, ಕಲಂ.138 ನೆಗೋಷಿಯಬಲ್ ಕಾಯ್ದೆ ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾಧಿಸಿದೆ.

ಸಹಿ/-

**ದಿನಾಂಕಃ 10.04.2026** — **ಸಿ/ಸಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಸ್ಥಳಃ ಚನ್ನಗಿರಿ.** — **ಜೆಎಮ್ಎಫ್‌ಸಿ ನ್ಯಾಯಾಲಯ, ಚನ್ನಗಿರಿ.**